ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ. ಬಿ . ಎಮ್ . ಎನ್ ವಕೀಲರಿಂದಃ**

ನಾನು 10 ನೇ ತರಗತಿಯನ್ನು ಸನ್ 2001-02 ರಲ್ಲಿ ಓದಿರುತ್ತೇನೆ. ನನ್ನ ಜನ್ಮ ದಿನಾಂಕ 16.03.1986 ಇರುತ್ತದೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಪೊಲೀಸರ ಮುಂದೆ ನಾನು ಎರಡು ಕಂಟೇನರ್ ವಾಹನಗಳ ಉದ್ಯೋಗ ಮಾಡುತ್ತಿರುವುದಾಗಿ ಹೇಳಿರುತ್ತೇನೆ. ನನ್ನ ವಯಸ್ಸು 50 ವರ್ಷಗಳಿಗಿಂತ ಹೆಚ್ಚಿ ಗೆ ಇರುತ್ತದೆಂದರೆ ಸರಿಯಲ್ಲ. ನಾನು ಎರಡು ಕಂಟೇನರ್ ವಾಹನಗಳನ್ನು ಹೊಂದಿರುತ್ತೇನೆ.

ಅಪಘಾತವಾದ ದಿನ ಕಾರನ್ನು ಮಲ್ಲಿಕಾರ್ಜುನ ಜುಟ್ಟಲಕೇರಿರವರು ನಡೆಸುತ್ತಿದ್ದರು. ಚಂದ್ರಶೇಖರ ನಾವಲಗಟ್ಟಿ, ವಿಶಾಲ ನಾವಲಗಟ್ಟಿ, ಖಲೀದ ಸಿಕ್ಕಲಗಾರ ಎಲ್ಲರೂ ಅಕ್ಕತಂಗೇರಹಾಳದ ಗ್ರಾಮದ ಸಮೀಪ ಇರುವ ದಾವಲಟ್ಟಿ ಗ್ರಾಮದವರು ಇರುತ್ತಾರೆ. ಈ ಮೇಲೆ ಹೇಳಿದ ಎಲ್ಲರೂ ನನ್ನ ಕಾರನ್ನು ಬಾಡಿಗೆಗಾಗಿ ತೆಗೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿಕೊಂಡು ದೇವಸ್ಥಾನಕ್ಕೆ ಹೊರಟಿದ್ದೆವು ಎಂದು ನುಡಿಯುತ್ತಾರೆ. ಸದರಿ ಕಾರು ಮಾರುತಿ ಯರ್ಟಿಗಾ ಕಂಪನಿಯದ್ದು ಇರುತ್ತದೆ. ಸದರೀ ದಿನ ನಾವು ಮಿರಜದಿಂದ ಅಡಿವೆಪ್ಪನಅಂಕಲಗಿಯ ಗ್ರಾಮಕ್ಕೆ ಬರುತ್ತಿದ್ದೆವು. ಸದರಿ ದಿನ ನಾನು ಮೇಲೆ ಹೇಳಿದ ಎಲ್ಲರನ್ನು ಡ್ರಾಪ್ ಮಾಡಲು ಅಕ್ಕತಂಗೇರಹಾಳ ಗ್ರಾಮಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ.

ಅಪಘಾತವಾದ ರಸ್ತೆಯು 20 ಅಡಿ ಅಗಲದ ಟಾರ್ ರಸ್ತೆ ಇದ್ದು, ಎರಡೂ ಬದಿಯಲ್ಲಿ ನಾಲ್ಕು ಅಡಿ ಅಗಲದ ಕಚ್ಚಾ ರಸ್ತೆ ಇರುತ್ತದೆಂದರೆ ನಿಜ. ಸದರೀ

ಅಪಘಾತವು ಟಾರ್ ರಸ್ತೆಯ ಮೇಲೆ ಆಗಿರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನಮ್ಮ ಬದಿ ಹೊರಟಿದ್ದು, ಎದುರಿನಿಂದ ಸಿಲೋರಾ ಕಾರು ಬಂದು ನಮ್ಮ ಕಾರಿಗೆ ಡಿಕ್ಕಿಪಡಿಸಿರುತ್ತದೆಂದು ನುಡಿಯುತ್ತಾರೆ. ಸದರೀ ಸಿಲೋರಾ ಕಾರಿಗಿಂತ ನಮ್ಮ ಯರ್ಟಿಗಾ ಕಾರು ದೊಡ್ಡದು ಇರುತ್ತದೆ. ಮಾಂಜರಿ, ಶಿರಗುಪ್ಪಿ , ಕುಡಚಿ, ರಾಯಬಾಗ, ಘಟಪ್ರಭಾ ಎಲ್ಲ ಕಡೆಗೂ ಸರಕಾರಿ ಆಸ್ಪತ್ರೆಗಳು ಇರುತ್ತವೆ ಎಂದರೆ ನಿಜ. ನಾವು ಸದರಿ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದುಕೊಳ್ಳದೇ ನೇರವಾಗಿ ಗೋಕಾಕದ ನಿಮ್ರಾ ಆಸ್ಪತ್ರೆಗೆ ಬಂದಿರುತ್ತೇವೆ.

ನನಗೆ ಮಾಸಿಕ ವ್ಯಾಪಾರ ಮತ್ತು ಒಕ್ಕಲುತನದಿಂದ ರೂ. 2,20,000/- ಹಣ ಬರುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ವ್ಯವಹಾರ ನಡೆಸುತ್ತಿದ್ದ ಬಗ್ಗೆ ದಾಖಲೆ ಇರುತ್ತದೆ ಆದರೆ ಹಾಜರುಪಡಿಸಿಲ್ಲ. ವ್ಯವಹಾರದ ಬಗ್ಗೆ ನಾನು ಆದಾಯ ತೆರಿಗೆ ಪಾವತಿಸಿದ್ದೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ನಾನು ನಿಮ್ರಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೂ. 2,50,000/- ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಂದಿನ ಚಿಕಿತ್ಸೆಗಾಗಿ ರೂ.1,00,000/- ಅವಶ್ಯಕತೆ ಇರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕಾರು ಎದುರಿಗೆ ಬರುತ್ತಿರುವ ಚಿಕ್ಕ ವಾಹನ ಸಿಲೋರಾ ಕಾರಿಗೆ ಡಿಕ್ಕಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- 2 ನೇ ಎದುರುದಾರ ಪರ ಶ್ರೀ ಎ . ಎ. ಪಿ ವಕೀಲರಿಂದಃ-**

ಅಪಘಾತದ ದಿನ ಯರ್ಟಿಗಾ ಕಾರಿನಲ್ಲಿ ನಾನು, ಚಂದ್ರಶೇಖರ ನಾವಲಗಟ್ಟಿ, ವಿಶಾಲ ನಾವಲಗಟ್ಟಿ, ಖಲೀದ ಸಿಕ್ಕಲಗಾರ ಹೊರಟಿದ್ದೆವು. ಸದರಿ ಕಾರಿಗೆ ನಾನೇ

ಮಾಲೀಕನಿರುತ್ತೇನೆ. ಸದರಿ ಕಾರಿಗೆ ವೈಟ್ ಬೋರ್ಡ ಇರುತ್ತದೆ. ನನ್ನ ಕಾರಿಗೆ ಮಾರುತಿ ಸುಜಕಿ ಇನ್ಸುರನ್ಸ್ ಇರುತ್ತದೆ. ನನ್ನ ಕಾರು ಜಖಂಗೊಂಡ ಬಗ್ಗೆ ಕಂಪನಿಯಿಂದ ಡ್ಯಾಮೇಜ ಕ್ಲೇಮ ಮಾಡಿಕೊಂಡಿರುತ್ತೇನೆ. ಸದರಿ ಕಾರನ್ನು ಮಾರುತಿ ಶೋ ರೂಮ್ ವೈಭವ ನಗರ, ಬೆಳಗಾವಿ ದುರಸ್ತಿಗಾಗಿ ಬಿಟ್ಟಿದ್ದೆ. ಆ ಸಮಯದಲ್ಲಿ ಕ್ಲೇಮ ಫಾರ್ಮನ್ನು ಭರ್ತಿ ಮಾಡಿ ಕೊಟ್ಟಿರುತ್ತೇನೆ. ಸದರಿ ಫಾರ್ಮನಲ್ಲಿ ಅಪಘಾತ ಹೇಗೆ ಸಂಭವಿಸಿರುತ್ತದೆನ್ನುವ ಬಗ್ಗೆ ನಮೂದಿಸಿರುವುದಿಲ್ಲ.

ಸದರಿ ಅಪಘಾತದ ದಿನ ಕಾರನ್ನು ಮಲ್ಲಿಕಾರ್ಜುನ ಜುಟ್ಟಲಕೇರಿ ನಡೆಸುತ್ತಿದ್ದನು. ನಾನು ಚಾಲಕನ ಹಿಂದಿನ ಆಸನದಲ್ಲಿ ಕುಳಿತಿದ್ದೆನು. ಚಾಲಕನ ಪಕ್ಕದ ಆಸನದಲ್ಲಿ ಚಂದ್ರಶೇಖರ ನಾವಲಗಟ್ಟಿ ಕುಳಿತಿದ್ದನು. ಚಾಲಕನಿಗೆ ಮತ್ತು ಚಂದ್ರಶೇಖರನಿಗೆ ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ. ನನಗೆ ಎದುರಿಗೆ ರಸ್ತೆಯಲ್ಲಿ ಬರುತ್ತಿದ್ದ ವಾಹನಗಳು ಕಾಣಿಸುತ್ತಿದ್ದವು. ನಾವು ಮಿರಜದಿಂದ ಅಂಕಲಗಿಯ ಕಡೆಗೆ ಬರುತ್ತಿದ್ದೆವು. ಎದುರಿಗೆ ವಾಹನಗಳು ಬರುತ್ತಿದ್ದು, ನಿಧಾನವಾಗಿ ಕಾರನ್ನು ಚಲಿಸುವಂತೆ ಚಾಲಕನಿಗೆ ಹೇಳಿರುತ್ತೀರಾ? ಎಂದರೆ ಸಾಕ್ಷಿಯು ನಮ್ಮ ಕಾರು ನಿಧನಾವಾಗಿ ಚಲಿಸುತ್ತಿತ್ತು ಎಂದು ನುಡಿಯುತ್ತಾರೆ.

ಸದರಿ ಅಪಘಾತವು ಮುಖಾ ಮುಖಿಯಾಗಿ ಆಗಿರುತ್ತದೆ. ಸದರೀ ಅಪಘಾತದಲ್ಲಿ ಎರಡೂ ವಾಹನಗಳಿಗೂ ಜಖಂಗಳು ಆಗಿರುತ್ತವೆ. ಸದರಿ ಅಪಘಾತದಲ್ಲಿ ನಮ್ಮ ಕಾರಿನಲ್ಲಿ ಕುಳಿತಿದ್ದ ನನಗೆ, ಮಲ್ಲಿಕಾರ್ಜುನ ಮತ್ತು ಚಂದ್ರಶೇಖರಗೆ ಮಾತ್ರ ಗಾಯಗಳು ಆಗಿರುತ್ತವೆ.

ಮಿರಜ-ಅಂಕಲಗಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಇರುತ್ತದೆಂದರೆ ನಿಜ. ಮಾಂಜರವಾಡಿ ಗ್ರಾಮದ ಹತ್ತಿರ ರಸ್ತೆಯು ಎಷ್ಟು ಅಗಲ ಇರುತ್ತದೆಂದು ನನಗೆ ಹೇಳಲು ಅಗುವುದಿಲ್ಲ. ರಸ್ತೆಯ ಮದ್ಯೆ ಡಿವೈಡರ್ ಇರುತ್ತದೆಂದು ನುಡಿದು ಪುನಃ

ಯಾವುದೇ ಡಿವೈಡರ್ ಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಾರಿನ ಚಾಲಕನು ಜೋರಾಗಿ ಚಲಾಯಿಸಿಕೊಂಡು ಹೋಗಿ ಎದುರಿಗೆ ಬರುತ್ತಿದ್ದ ಸಿಲೋರಾ ಕಾರಿಗೆ ಡಿಕ್ಕಿಪಡಿಸಿರುತ್ತಾನೆಂದರೆ ಸರಿಯಲ್ಲ. ನಮ್ಮ ಕಾರಿಗೆ ವಿಮೆ ಇದ್ದರೂ ಸಹ ಸಹ ಪ್ರಯಾಣಿಕರಿಗೆ ಪರಿಹಾರ ಕೊಡುವ ಬಗ್ಗೆ ಬಾಧ್ಯತೆ ಇರದೇ ಇದ್ದ ಕಾರಣ ಹಾಗೂ ಸಿಲೋರಾ ವಾಹನದ ಚಾಲಕ ಅಪಘಾತದಲ್ಲಿ ತೀರಿಕೊಂಡಿದ್ದು, ಅದರ ಪ್ರಯೋಜನ ಪಡೆದುಕೊಂಡಿದ್ದು, ಅತನ ವಿರುದ್ಧ ಒಂದು ದಿನ ತಡವಾಗಿ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಬಲ ಕೈ ಕಾಲುಗಳಿಗೆ ಪೆಟ್ಟಾಗಿರುತ್ತದೆ. ನಾನು ಗೋಕಾಕದ ನಿಮ್ರಾ ಆಸ್ಪತ್ರೆಯಲ್ಲಿ 15 ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಸಂಪೂರ್ಣವಾಗಿ ನಿಮ್ರಾ ಆಸ್ಪತ್ರೆಯ ವೈದ್ಯರು ಮಾತ್ರ ಚಿಕಿತ್ಸೆ ನೀಡಿರುತ್ತಾರೆ. ನಾನು ಮನೆಯಲ್ಲಿ ಪಿಜಿಯೋಥೆರಪಿ ಮಾಡಿಸಿಕೊಂಡಿರುತ್ತೇನೆ. ಸದರಿ ಪಿಜಿಯೋಥೆರಪಿಯಿಂದ ನನ್ನ ಕೈ ಕಾಲುಗಳು ಗುಣಮುಖವಾಗಿರುತ್ತವೆ ಎಂದರೆ ಸರಿಯಲ್ಲ.

ನಾನು ಕಂಟೇನರ್ ಗಳನ್ನು ಎಲ್ಲಿ ಕೆಲಸ ಇರುತ್ತದೆಯೋ ಅಲ್ಲಿಗೆ ಕಳುಹಿಸುತ್ತೇನೆ. ನಾನು ಸನ್ 2023-24, 2024-25 ನೇ ಸಾಲಿನ ಆದಾಯ ತೆರಿಗೆ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಹೋದ ವರ್ಷ ಎಷ್ಟು ಆದಾಯ ತೆರಿಗೆ ಪಾವತಿಸಿರುತ್ತೇನೆ, ಈ ವರ್ಷ ಎಷ್ಟು ಆದಾಯ ತೆರಿಗೆ ಪಾವತಿಸಿರುತ್ತೇನೆಂದು ಹೇಳಲು ಆಗುವುದಿಲ್ಲ. ಈಗಲೂ ಸಹ ಕಂಟೇನರ್ ಗಳು ಕೆಲಸಕ್ಕೆ ಹೋಗುತ್ತವೆ.

ಗೊಡಚಿನಮಲ್ಕಿ ಗ್ರಾಮದಲ್ಲಿ 02 ಎಕರೆ ಜಮೀನು ಇರುತ್ತದೆ. ಸದರೀ ಜಮೀನಿಗೆ ನೀರಾವರಿ ಸೌಲಭ್ಯ ಇರುತ್ತದೆ. ಜಮೀನಿನಲ್ಲಿ ಕಬ್ಬು ಬೆಳೆಯುತ್ತೇನೆ.

ಹೋದ ಸಲ ಎಷ್ಟು ಕಬ್ಬು ಬೆಳೆದಿರುತ್ತೇನೆಂದು ಗೊತ್ತಿಲ್ಲ. ನಾನು ಒಕ್ಕಲುತನವನ್ನು ಮಾಡುವುದಿಲ್ಲ. ನನ್ನ ತಂದೆ ತಾಯಿ ಜಮೀನನ್ನು ನೋಡಿಕೊಳ್ಳುತ್ತಾರೆ. ಸದರಿ ಅಪಘಾತದಿಂದ ನನ್ನ ಆದಾಯದಲ್ಲಿ ಯಾವುದೇ ವ್ಯತ್ಯಾಸ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಿಂದ ಸಂಪೂರ್ಣವಾಗಿ ಗುಣಮುಖವಾದ ನಂತರ ಬಿಡಗಡೆ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಖಾಯಂ ತರೀಖವಾಗಿ ಗೊಡಚಿನಮಲ್ಕಿಯಲ್ಲಿ ವಾಸವಾಗಿರುತ್ತೇನೆ. ಗೋಕಾಕದಿಂದ ಗೊಡಚಿನಮಲ್ಕಿ ಗ್ರಾಮವು 16 ಕಿ.ಮೀ ಅಂತರದಲ್ಲಿರುತ್ತದೆ. ಈ ದಿನ ನಾನು ಗೊಡಚಿನಮಲ್ಕಿಯಿಂದ ಬಾಡಿಗೆ ಕಾರಿನಲ್ಲಿ ಬಂದಿರುತ್ತೇನೆ. ನ್ಯಾಯಾಲಯದ ಗೇಟಿನಿಂದ ಒಳಗಡೆ ನಿಧಾನವಾಗಿ ನಡೆದುಕೊಂಡು ಬಂದಿರುತ್ತೇನೆ.

ಸದರಿ ಅಪಘಾತವು ನಮ್ಮ ಕಾರಿನ ಚಾಲಕನ ತಪ್ಪಿ ನಿಂದ ಸಂಭವಿಸಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ , ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ